ಓ.ಎಸ್.80/2022,　　　　　ಡಿ.ಡಬ್ಲ್ಯೂ.3　　ಹೆಸರುಃ ಮರುಳಸಿದ್ದಪ್ಪ

**<u>ದಿಃ13-07-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟಿ ಸವಾಲು : ವಾದಿಯರ ಪರ ಶ್ರೀ ಎನ್.ಹೆಚ್.ಎಸ್. ವಕೀಲರಿಂದಃ</u>**

ವಾದಿ ಮತ್ತು ಪ್ರತಿವಾದಿಯರ ತಂದೆಗೆ ದಾವಾ ಅನುಸೂಚಿತ ಸ್ವತ್ತು ಸೇರಿದಂತೆ ಬಂಡೆಬೊಮ್ಮೇನಹಳ್ಳಿಯಲ್ಲಿ ಒಂದು ವಾಸದ ಮನೆ ಇತ್ತು ಎಂದರೆ ಸರಿ. ಮನೆಯನ್ನು ದಿ.11.10.2010 ರಂದು ನಮ್ಮ ಗ್ರಾಮದ ಆರ್.ಯೋಗೇಶ್ ಬಿನ್ ರುದ್ರಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಮನೆಯ ವಿಚಾರದ ಕುರಿತು ನನಗೆ ಗೊತ್ತಿಲ್ಲ. ಆರ್. ಯೋಗೇಶ್ ಬಿನ್ ರುದ್ರಪ್ಪರವರು ನನಗೆ ಗೊತ್ತಿಲ್ಲ. ದಿನಾಂಕ 03.08.2022 ರಂದು ವಾದಿ ಮತ್ತು ಆಕೆಯ ಮಕ್ಕಳು ಪ್ರತಿವಾದಿಯ ಮನೆಯ ಬಳಿ ಬಂದು ದಾವಾಸ್ವತ್ತಿನ ಜಮೀನಿನಲ್ಲಿ ಭಾಗ ನೀಡುವಂತೆ ಕೇಳಿದ ವಿಚಾರದ ಕುರಿತು ಗಲಾಟೆ ಆಗಿದ್ದರ ಬಗ್ಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಪ್ರತಿವಾದಿ ನನ್ನನ್ನು ಪಂಚಾಯಿತಿಗೆ ಕರೆದಿದ್ದರು ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ನಡುವಿನ ವ್ಯವಹಾರದ ಕುರಿತು ನನಗೆ ಗೊತ್ತಿಲ್ಲ. ಹಾಗಾಗಿ ವಾದಿ ಮತ್ತು ಪ್ರತಿವಾದಿಯ ನಡುವೆ ದಾವಾ ಸ್ವತ್ತು ಮತ್ತು ಮನೆಯ ಕುರಿತು ಏನು ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ.

2. ನಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣ ಪತ್ರದ ವಿಚಾರದ ಕುರಿತು ನನಗೆ ಮಾಹಿತಿ ಇದೆ. ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ ಒಂದು ಸ್ವತ್ತಿನ ಕುರಿತು ಕುಬೇರಪ್ಪರವರು ದಾವೆಯನ್ನುಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ 2020 ರಲ್ಲಿ ಆದಂತಹ ವ್ಯವಹಾರದ ಕುರಿತು ಗೊತ್ತು. ವಾದಿ ಮತ್ತು ಆಕೆಯ ಮಕ್ಕಳು 2020 ನೇ ಸಾಲಿನಲ್ಲಿ ಜಮೀನಿನ ಭಾಗದ ಕುರಿತು ಬಂದಿದ್ದರು, ಆಗ ನನ್ನನ್ನು ಸಹ ಕರೆದಿದ್ದರು. ಈ ವಿಚಾರವನ್ನು ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಪಂಚಾಯಿತಿಯಲ್ಲಿ ಹೊಂದಾಣಿಕೆ ಆಗದ ಕಾರಣ ವಾದ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

3. ಪ್ರತಿವಾದಿ ಮತ್ತು ಆಕೆಯ ಮಕ್ಕಳು ಹಾಗೂ ನಾನು ಅನ್ಯೂನ್ಯವಾಗಿ ಇದ್ದೇವೆ ಎಂದರೆ ಸಾಕ್ಷಿ ವಾದಿ ಮತ್ತು ಪ್ರತಿವಾದಿ ಇಬ್ಬರೊಂದಿಗೂ ಸಹ ಅನ್ಯೂನ್ಯವಾಗಿ ಇದ್ದೇನೆ ಎಂದು ಹೇಳುತ್ತಾರೆ. 2022 ನೇ ಸಾಲಿನಲ್ಲಿ ವಾದಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಕುರಿತು ತನ್ನ ಹಿಸ್ಸೆಯನ್ನು ಕೇಳಿ ಪ್ರತಿವಾದಿಯ ಬಳಿ ಬಂದಿದ್ದರು ಎಂದರ ಸರಿಯಲ್ಲ. ಆಗ ನಾನು ಮತ್ತು ಇನ್ನೊಬ್ಬರು ಪ್ರತಿವಾದಿಗೆ ಕೊಡಿ ಎಂದು ಹೇಳಿದ್ದೆವು ಎಂದರೆ ಸಾಕ್ಷಿ

2020 ರಲ್ಲಿ ಹೇಳಿದ್ದೆವು ಎಂದು ಹೇಳುತ್ತಾರೆ. ಪಂಚಾಯಿತಿ ಆದ ಬಗ್ಗೆ ದಾಖಲಾತಿ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುರಿತು ಮತ್ತು ದಾವಾ ಸ್ವತ್ತಿನ ಕುರಿತು ನನಗೆ ಯಾವುದೆ ಮಾಹಿತಿ ಇಲ್ಲದಿದ್ದಾಗ್ಯೂ, ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ